## 2. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು :

**ಶ್ರೀ ಎಸ್.ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು)** : ಮಾನ್ಯ ಅಧ್ಯಕ್ಷರೆ, ದಿನಾಂಕ: 12ನೇ ಮಾರ್ಚ್ 2010ರ 5ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 87 ಪ್ರಶ್ನೆಗಳ ಪೈಕಿ 80 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಅನುಬಂಧ–1)**

**ಅಧ್ಯಕ್ಷರು** : ಮಂಡಿಸಲಾಯಿತು.

## 3. ಚುನಾವಣಾ ಪ್ರಸ್ತಾವ :

**ಶ್ರೀ ಎಸ್. ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು)** : ಕರ್ನಾಟಕ ರಾಜ್ಯ ಡಾ:ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ವಿಶ್ವವಿದ್ಯಾನಿಲಯಗಳ ಸಿಂಡಿಕೇಟ್‌ಗೆ ನಡೆಯುವ ಚುನಾವಣಾ ಪ್ರಸ್ತಾವವನ್ನು ನಾನು ದಿನಾಂಕ: 02.03.2010 ರಂದು ಮಂಡಿಸಿರುತ್ತೇನೆ. ತದನಂತರ ಚುನಾವಣಾ ವೇಳಾಪಟ್ಟಿಯನ್ನು ಹೊರಡಿಸಲಾಗಿ, ಕರ್ನಾಟಕ ರಾಜ್ಯ ಡಾ: ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ವಿಶ್ವವಿದ್ಯಾ ನಿಲಯಗಳ ಸಿಂಡಿಕೇಟ್‌ಗೆ ಒಬ್ಬರು ವಿಧಾನ ಸಭಾ ಸದಸ್ಯರನ್ನು ನಾಮ ನಿರ್ದೇಶನ ಮಾಡಲು ಈ ಸದನವು ಮಾನ್ಯ ಸಭಾಧ್ಯಕ್ಷರಿಗೆ ಅಧಿಕಾರವನ್ನು ನೀಡಬೇಕೆಂದು ಕೋರುತ್ತೇನೆ.

**ಅಧ್ಯಕ್ಷರು** : ಪ್ರಸ್ತಾವ ಏನೆಂದರೆ,

"ಕರ್ನಾಟಕ ರಾಜ್ಯ ಡಾ: ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ವಿಶ್ವವಿದ್ಯಾನಿಲಯಗಳ ಸಿಂಡಿಕೇಟ್‌ಗೆ ಒಬ್ಬರು ವಿಧಾನ ಸಭಾ ಸದಸ್ಯರನ್ನು ನಾಮ ನಿರ್ದೇಶನ ಮಾಡಲು ಈ ಸದನವು ಮಾನ್ಯ ಸಭಾಧ್ಯಕ್ಷರಿಗೆ ಅಧಿಕಾರವನ್ನು ನೀಡುವುದು"

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು

**4. ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳಿಗೆ ತಿದ್ದುಪಡಿ ತರಲು ರಚಿತವಾದ ಕರ್ನಾಟಕ ವಿಧಾನ ಸಭೆಯ ನಿಯಮಗಳ ಸಮಿತಿಯ ವರದಿ**

ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಎಸ್.ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು) :** ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಸಭೆಯ ನಿಯಮಗಳ ಸಮಿತಿಯು ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳಿಗೆ ತಿದ್ದುಪಡಿ ತರುವ ಬಗ್ಗೆ ಮಂಡಿಸಿದ ವರದಿಯನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

**ಶ್ರೀ ಎಸ್. ಸುರೇಶ್ ಕುಮಾರ್ :** ಮಾನ್ಯ ಅಧ್ಯಕ್ಷರೆ, ನಿಯಮಾವಳಿ ಸಮಿತಿಯನ್ನು ಹಿಂದಿನ ಸಭಾಧ್ಯಕ್ಷರು ನೇತೃತ್ವದಲ್ಲಿ ರಚಿಸಲಾಗಿತ್ತು. ಮಾನ್ಯ ಜಯಚಂದ್ರರವರೂ ಸಹ ಅದರಲ್ಲಿ ಸದಸ್ಯರಾಗಿದ್ದರು. ಆ ಸಮಿತಿ ನಾಲ್ಕು ಶಿಫಾರಸ್ಸುಗಳನ್ನು ಮಾಡಿದೆ. ಮೊದಲನೆಯದಾಗಿ, on par with PAC 'ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿ' ರಚನೆ ಮಾಡಬೇಕು. PAC ತರಹವೇ ಸಮಿತಿಯೊಂದನ್ನು ರಚಿಸಬೇಕು ಎಂದು ಸಮಿತಿ ಹೇಳಿದೆ. CAG ಸಹ ಈ ರೀತಿ 'ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಮಿತಿ' ರಚಿಸಬೇಕೆಂದು recommendation ಮಾಡಿದೆ. ಎರಡನೆಯದಾಗಿ, ಪ್ರತಿ ಶುಕ್ರವಾರ ಖಾಸಗಿ ನಿರ್ಣಯ ಮತ್ತು ವಿಧೇಯಕಗಳ ಕಲಾಪಕ್ಕಾಗಿ ಸಮಯವೊಂದನ್ನು ನಾವು ನಿಗದಿ ಮಾಡಿಕೊಂಡಿದ್ದೆವು. ಆದರೆ ಪ್ರತಿ ಶುಕ್ರವಾರ ಅದು ಆಗುತ್ತಿಲ್ಲ. ಏಕೆಂದರೆ, ಪ್ರತಿ ಶುಕ್ರವಾರ ಮಧ್ಯಾಹ್ನ ಆಗುತ್ತಲೇ, ಮಾನ್ಯ ಸದಸ್ಯರೆಲ್ಲರೂ ಹೋಗುವ ಆತುರದಲ್ಲಿರುವುದರಿಂದ ಯಾವುದೇ ಖಾಸಗಿ ನಿರ್ಣಯ/ವಿಧೇಯಕಗಳ ಮೇಲೆ ಚರ್ಚೆಯಾಗುತ್ತಿಲ್ಲ. ಆದ್ದರಿಂದ ಖಾಸಗಿ ಕಾರ್ಯಕಲಾಪಗಳನ್ನು ಪ್ರತಿ ಶುಕ್ರವಾರ ಬದಲು ಇನ್ನು ಮುಂದೆ ಪ್ರತಿ ಗುರುವಾರದಂದು ನಿಗದಿಗೊಳಿಸ ಬೇಕೆಂದು ನಿಯಮಾವಳಿ ಸಮಿತಿ recommendation ಮಾಡಿದೆ. ನಾನು